ಯುವತಿಯರು ಇದೀಗ ಆಧುನಿಕತೆ ಮೆರುಗಿನೊಂದಿಗೆ ಫ್ಯಾಷನ್ ಲೋಕಕ್ಕೆ ರೀ ಎಂಟ್ರಿ ಕೊಟ್ಟಿರುವ ಬುಗುಡಿಯ ಅಂದಕ್ಕೆ ಮಾರು ಹೋಗಿದ್ದಾರೆ.

ಕಿವಿಗೆ ಧರಿಸುವ ಆಭರಣಗಳಲ್ಲಿ ಸಾಕಷ್ಟು ವಿನ್ಯಾಸಗಳಿವೆ. ಓಲೆಗಳ ಜೊತೆಗೆ ಒಂದೆಳೆ ಸರಪಳಿ, ಎರಡೆಳೆ, ಮೂರೆಳೆ ಸರಪಳಿ ವಿನ್ಯಾಸ, ಲೋಲಾಕುಗಳು, ವಿವಿಧ ವಿನ್ಯಾಸದ ಜುಮುಕಿಗಳು, ಚಿಕ್ಕ ಗಾತ್ರದಿಂದ ದೊಡ್ಡ ಗಾತ್ರದವರೆಗೆ ಸಿಗುವ ವಿವಿಧ ವಿನ್ಯಾಸದ ರಿಂಗ್‌ಗಳು... ಹೀಗೆ ಕಿವಿಗೆ ಹಾಕಿಕೊಳ್ಳುವ ಆಭರಣಗಳಿದ್ದರೂ ಇವುಗಳಲ್ಲಿ ಓಲೆಯ ನಂತರ ಅತ್ಯಂತ ಪ್ರಮುಖವಾದದ್ದೆಂದರೆ ಅದು ಬುಗುಡಿಯೇ.

ಕಿವಿಯೋಲೆಯ ಮೇಲ್ಭಾಗದಲ್ಲಿ ಧರಿಸುವ ಈ ಬುಗುಡಿ ತೆಳ್ಳನೆಯ ಮಾದರಿಯಲ್ಲಿ ತಮ್ಮ ಅಂದವನ್ನು ಹೆಚ್ಚಿಸಿಕೊಳ್ಳುತ್ತಿದೆ. ಮೂಲತಃ ತಮಿಳು ಬುಡಕಟ್ಟು ಜನಾಂಗ, ರಾಜಸ್ಥಾನಿ, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ಕೇರಳದ ಗ್ರಾಮೀಣ ಜನರಲ್ಲಿ ಹೆಚ್ಚಾಗಿ ಈ ತರಹದ ಬುಗುಡಿ ನಮಗೆ ನೋಡಲು ಸಿಗುತ್ತವೆ. ಇವು ಅವರ ಸಾಂಪ್ರದಾಯಿಕ ಆಭರಣಗಳಲ್ಲಿ ಒಂದಾಗಿವೆ. ಬುಡಕಟ್ಟು ಜನಾಂಗದಲ್ಲಿ ಬರೀ ಬೆಳ್ಳಿಯ ಕಡ್ಡಿಯಿಂದ ತಯಾರಿಸಿದ ಬುಗುಡಿ ಧರಿಸುತ್ತಿದ್ದರೆ, ಶ್ರೀಮಂತ ಮನೆತನದವರು ಮುತ್ತು, ಹವಳ, ಬಂಗಾರದಲ್ಲಿ ತಯಾರಿಸಿದ ಬುಗುಡಿ ಧರಿಸುತ್ತಾರೆ.

ಯಾವುದೇ ಶುಭ ಸಮಾರಂಭಕ್ಕೆ ಹೋದರೆ, ನೀವು ಧರಿಸುವ ಸಾಂಪ್ರದಾಯಿಕ ಉಡುಪುಗಳಾದ ಸೀರೆ, ಲೆಹೆಂಗಾ, ಗಾಗ್ರಾ ಈ ತರಹದ ಗ್ರ್ಯಾಂಡ್ ಉಡುಪುಗಳಿಗೆ ತುಂಬಾ ಗ್ರ್ಯಾಂಡಾಗಿರುವ ಮುತ್ತು, ಹವಳಗಳುಳ್ಳ ಬುಗುಡಿ ಧರಿಸಬಹುದು. ಇದು ನಿಮ್ಮ ಉಡುಪುಗಳಿಗೆ ರಿಚ್ ಲುಕ್ ನೀಡುತ್ತದೆ. ಹಾಗೇ ತೆಳ್ಳನೆಯ ಸಿಲ್ವರ್, ಬ್ಲಾಕ್ ಮೆಟಲ್, ವೈಟ್ ಮೆಟಲ್ ಬುಗುಡಿಗಳನ್ನು ನಿಮ್ಮ ಮಾಡರ್ನ್ ಉಡುಪುಗಳ ಜೊತೆಗೆ ಮ್ಯಾಚ್ ಮಾಡಿ ಪಾರ್ಟಿಗಳಿಗೆ ಧರಿಸಬಹುದು.







## ಪುರುಷರಿಗೂ...

ಬುಗುಡಿ ಬರೀ ಮಹಿಳೆಯರಿಗೆ ಮಾತ್ರ ಸೀಮಿತವಾಗಿಲ್ಲ. ಮಹಾರಾಷ್ಟ್ರ ಹಾಗೂ ಗುಜರಾತಿನಲ್ಲಿ ಪುರುಷರು ಕೂಡ ಓಲೆ ಹಾಗೂ ಬುಗುಡಿಗಳನ್ನು ಧರಿಸುತ್ತಾರೆ. ಮಹಾರಾಷ್ಟ್ರದ ರಾಜಮನೆತನದವರು ಈ ಬುಗುಡಿಗಳಲ್ಲಿ ಮುತ್ತು, ಹವಳದ ಪದಕ ಹಾಗೂ ಹರಳುಗಳುಳ್ಳ ಬುಗುಡಿಯನ್ನು ಧರಿಸುವುದು ಸಾಮಾನ್ಯ. ಗಂಡಸರು ಧರಿಸುವ ಈ ಬುಗುಡಿಗೆ ಬಾಲಿ ಎಂದೂ ಕರೆಯುತ್ತಾರೆ. ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ನಡೆಯುವ ಮದುವೆ ಸಮಾರಂಭಗಳಲ್ಲಿ ಪುರುಷರು ಈ ತರಹದ ಮುತ್ತು, ಹವಳಗಳನ್ನು ಅಳವಡಿಸಿದ ಸಾಂಪ್ರದಾಯಿಕ ಬಾಲಿ ಧರಿಸುವುದನ್ನು ನಾವು ನೋಡಬಹುದು. ಇದು ಪುರುಷರ ಹಾಟ್ ಫೇವರೆಟ್ ಫ್ಯಾಷನ್ ಎಂದು ಹೇಳಬಹುದು.

ಬುಗುಡಿಗಳಲ್ಲಿ ಸಾಕಷ್ಟು ವಿನ್ಯಾಸಗಳಿವೆ. ಮಹಾರಾಷ್ಟ್ರಿಯನ್ ಬುಗುಡಿ ಎಂದರೆ ಅವುಗಳಲ್ಲಿ ಮುತ್ತುಗಳನ್ನು ಅಳವಡಿಸಲಾಗಿರುತ್ತದೆ. ಇವುಗಳಲ್ಲಿ ಸಾಂಪ್ರದಾಯಿಕ ಬುಗುಡಿಗಳು ನವಿಲಿನ ಆಕಾರ ಹೊಂದಿದ್ದು, ಅವುಗಳ ಅಲಂಕಾರಕ್ಕೆ ಮಧ್ಯೆ ಕೆಂಪು ಹರಳು ಹಾಗೂ ಸುತ್ತಲೂ ವಿವಿಧ ಗಾತ್ರದ ಬಿಳಿ ಮುತ್ತುಗಳನ್ನು ಅಲಂಕರಿಸಿರುತ್ತಾರೆ. ನೋಡಲು ಅತ್ಯಂತ ಸುಂದರವಾಗಿರುವ ಈ ತರಹದ ಬುಗುಡಿಗಳು ಮದುವೆ ಅಥವಾ ಇನ್ನಿತರ ಶುಭ ಸಮಾರಂಭಕ್ಕೆ ಧರಿಸಲು ತುಂಬಾ ಸೂಕ್ತವಾದ ಆಭರಣ. ಇನ್ನು ಬುಗುಡಿಗಳು ಬರೀ ಒಂದು ತೆಳುವಾದ ಕಡ್ಡಿ ಜೊತೆಗೆ ಲವಂಗದ ಆಕಾರದಲ್ಲಿದ್ದರೆ ಇದನ್ನು ಲವಂಗ ಕಡ್ಡಿ ಬುಗುಡಿ ಎನ್ನಲಾಗುತ್ತದೆ.

ಇನ್ನು ಬರೀ ತೆಳುವಾದ ಕಡ್ಡಿಯಂತಿದ್ದರೆ ಕಡ್ಡಿ ಬುಗುಡಿ, ಹಾಗೇ ದೇವಾಲಯದ ಕಳಶದ ತರಹ ಎರಡು ತುದಿ ಇರುವ ಬುಗುಡಿಗೆ ಕಳಸಿನ ಬುಗುಡಿ ಎಂದು ಕರೆದರೆ ಸಣ್ಣ ಸಣ್ಣ ಮುತ್ತುಗಳಿಂದ ಅಲಂಕೃತವಾದದ್ದನ್ನು ಮೋತಿ ಬುಗುಡಿ ಎನ್ನಲಾಗುತ್ತದೆ. ಬುಗುಡಿಯ ಕೆಳಭಾಗದಲ್ಲಿ ನೇತಾಡುವ ಕಲಶವನ್ನು ಜುಮ್ಕಿ ಬುಗುಡಿ ಎನ್ನುತ್ತಾರೆ. ನಾಜೂಕಾದ ಲವಂಗ ಬುಗುಡಿಗಳು ಆಧುನಿಕ ಡ್ರೆಸ್‌ಗಳಿಗೆ ಸರಿಹೊಂದಿದರೆ ಮೋತಿ ಹಾಗೂ ಜುಮ್ಕಿ ಬುಗುಡಿಗಳು ರಾಯಲ್ ಲುಕ್ ಕೊಡುವುದರಿಂದ ಸಮಾರಂಭಗಳಲ್ಲಿ ಈ ಬುಗುಡಿಯನ್ನು ಹೆಚ್ಚಾಗಿ ಧರಿಸಿಕೊಳ್ಳುವವರು ಇದ್ದಾರೆ. ■